| | |
|---|---|
| ಪ್ರಾಸಾ | 11 |
| ಚಾಸಾ | 11 |

ಕರ್ನಾಟಕ ಸರ್ಕಾರ (ಸಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ:57)
ನಮೂನೆ ಸಂಖ್ಯೆ 4
(ಸಿವಿಲ್)

**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಬಳ್ಳಾಪುರ**

**ವಿಶೇಷ ಸತ್ರ ಪ್ರಕರಣ ಸಂಖ್ಯೆ: 123/2023**

(1 ಮತ್ತು 2 ನೇ ಆರೋಪಿತರನ್ನು ವಿ.ಸಿ ಮುಖಾಂತರ ವಿಚಾರಣೆಗೆ ಹಾಜರುಪಡಿಸಲಾಗಿದೆ)

**ದಿನಾಂಕ: 03.09.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಿತು.**

| | | |
|---|---|---|
| ಸಾಕ್ಷಿದಾರರ ಹೆಸರು | : | ಮನೋಜ್ |
| ತಂದೆ ಹೆಸರು | : | ದೇವಕೃಷ್ಣಪ್ಪ |
| ವಯಸ್ಸು | : | 25 ವರ್ಷ |
| ಉದ್ಯೋಗ | : | ರೇಷ್ಮೆ ಕೆಲಸ |
| ವಾಸಸ್ಥಳ | : | ಬೈರಗಾನಹಳ್ಳಿ |

**ಮುಖ್ಯ ವಿಚಾರಣೆ: ಸಾರ್ವಜನಿಕ ಅಭಿಯೋಜಕರಿಂದ:-**

**1.** ಪ್ರಾಸಾ-1,3,7 ರಿಂದ 10 ಗೊತ್ತು. ವಿ.ಸಿ. ಮುಖಾಂತರ ಹಾಜರುಪಡಿಸಿದ ಆರೋಪಿತರ ಪೈಕಿ 1 ನೇ ಆರೋಪಿಯನ್ನು ನಾನು ನೋಡಿದ್ದೇನೆ, 2 ನೇ ಆರೋಪಿಯನ್ನು ನಾನು ನೋಡಿಲ್ಲ. ನ್ಯಾಯಾಲಯದ ಮುಂದಿರುವ ಆರೋಪಿತರ ಪೈಕಿ 3,4 ಮತ್ತು 6 ನೇ ಆರೋಪಿತರನ್ನು ನೋಡಿದ್ದೇನೆ.

| | |
|---|---|
| ಪ್ರಾಸಾ | 11 |
| ಚಾಸಾ | 11 |

ನ್ಯಾಯಾಲಯದ ಮುಂದಿರುವ 5 ನೇ ಆರೋಪಿ ನನಗೆ ಗೊತ್ತಿಲ್ಲ.

**2.** ಮೃತ ನಾರಾಯಣಸ್ವಾಮಿರವರು ಗೊತ್ತು. ಅವರು ಕೊಲೆಯಾಗಿರುತ್ತಾರೆ. ಸುಮಾರು ಒಂದು ವರ್ಷಗಳ ಹಿಂದೆ ಸಂಜೆ 6.30-7.00 ಗಂಟೆ ಸಮಯದಲ್ಲಿ ಊರಿನವರೆಲ್ಲಾ ನಾರಾಯಣಸ್ವಾಮಿರವರು ಕೊಲೆಯಾಗಿದ್ದಾರೆಂದು ಅವರ ಶವ ಇದ್ದ ಸ್ಥಳಕ್ಕೆ ಹೋಗುತ್ತಿದ್ದರು. ನಾನು ಸಹ ಅವರೊಂದಿಗೆ ಹೋಗಿರುತ್ತೇನೆ. ಸದರಿ ಮೃತ ನಾರಾಯಣಸ್ವಾಮಿರವರಿಗೆ ಏಟುಗಳಾಗಿ ಮೃತರಾಗಿದ್ದರು. ಯಾವ ಕಾರಣದಿಂದ ಸದರಿ ನಾರಾಯಣಸ್ವಾಮಿರವರು ಕೊಲೆಯಾಗಿರುತ್ತಾರೆಂದು ನನಗೆ ಗೊತ್ತಿಲ್ಲ. ನಾರಾಯಣಸ್ವಾಮಿರವರ ಬಗ್ಗೆ 1 ನೇ ಆರೋಪಿಯು ನನ್ನನ್ನು ವಿಚಾರಿಸಿಲ್ಲ. ಈ ಪ್ರಕರಣದಲ್ಲಿ ನಾನು ಪೊಲೀಸರಿಗೆ ಹೇಳಿಕೆ ನೀಡಿಲ್ಲ. ಈ ಪ್ರಕರಣದಲ್ಲಿ ಬೇರೆ ಏನು ವಿಚಾರ ಗೊತ್ತಿಲ್ಲ.

**(ಈ ಹಂತದಲ್ಲಿ ವಿಶೇಷ ಸಾರ್ವಜನಿಕ ಅಭಿಯೋಜಕರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದರು. ಅಭಿಯೋಜಕರಿಗೆ ಅನುಮತಿ ನೀಡಲಾಯಿತು.)**

**ಪಾಟೀ ಸವಾಲು: ವಿಶೇಷ ಸಾರ್ವಜನಿಕ ಅಭಿಯೋಜಕರಿಂದ:-**

**3.** ಪೊಲೀಸರಿಗೆ ನಾನು ಘಟನೆಯ ಬಗ್ಗೆ ಹೇಳಿಕೆ ನೀಡಿದ್ದೇನೆಂದರೆ ಸರಿಯಲ್ಲ. 1 ನೇ ಆರೋಪಿ ಹಾಗೂ 6 ನೇ ಆರೋಪಿಯ ಅಕ್ರಮ ಸಂಬಂಧದ ವಿಚಾರವು ಪ್ರಾಸಾ-

| | |
|---|---|
| ಪ್ರಾಸಾ | 11 |
| ಚಾಸಾ | 11 |

10 ರವರಿಗೆ ಗೊತ್ತಾಗಿ, ಈ ಬಗ್ಗೆ ನಾರಾಯಣಸ್ವಾಮಿರವರ ರಾಜಿ ಪಂಚಾಯ್ತಿ ಮಾಡಿದಾಗ 1ನೇ ಆರೋಪಿಯು ಕೋಪಗೊಂಡು ನಿಮ್ಮಿದ ಏನಾಗುತ್ತದೊ ಎಂದು ಹೇಳಿ ಹೊರಟು ಹೋಗಿದ್ದನೆಂದು, ನಂತರ ನಾರಾಯಣಸ್ವಾಮಿರವರ ಸಲಹೆಯ ಮೇರೆಗೆ ಮಂಜುಳರವರ ಮುಖಾಂತರ ದಿಬ್ಬೂರಹಳ್ಳಿ ಪೊಲೀಸ್ ಠಾಣೆಗೆ ದೂರು ನೀಡಿಸಿದ್ದರೆಂದು, ನಂತರ ಎಲ್ಲರನ್ನು ಠಾಣೆಗೆ ಕರೆಯಿಸಿ ವಿಚಾರಿಸಿದರು ಎಂದು ತಿಳಿಯಿತು ಎಂದರೆ ಸರಿಯಲ್ಲ. ನಾರಾಯಣಸ್ವಾಮಿರವರು ಮೃತರಾಗುವುಕ್ಕಿಂತ 1-3 ದಿನಗಳ ಮೊದಲು 1ನೇ ಆರೋಪಿಯು ನಾರಾಯಣಸ್ವಾಮಿರವರ ಬಗ್ಗೆ ನನ್ನ ಬಳಿ ಕೇಳಿದ್ದರು ಎಂದರೆ ಸರಿಯಲ್ಲ.

**4.** ಸದರಿ 1ನೇ ಆರೋಪಿ ಹಾಗೂ ಅಕ್ರಮ ಸಂಬಂಧದ ವಿಚಾರದ ಬಗ್ಗೆ ನಾರಾಯಣಸ್ವಾಮಿರವರು ಪೊಲೀಸ್ ಠಾಣೆಗೆ ದೂರು ನೀಡಿಸಿದ್ದ ಹಿನ್ನಲೆಯಲ್ಲಿ 6 ನೇ ಆರೋಪಿಯ ಕುಮ್ಮಕ್ಕಿನಿಂದ 1 ರಿಂದ 5ನೇ ಆರೋಪಿತರು ನಾರಾಯಣಸ್ವಾಮಿರವರನ್ನು ಕೊಲೆ ಮಾಡಲು ಸಂಚು ರೂಪಿಸಿ, 4ನೇ ಆರೋಪಿಯ ಸಹಕಾರದಿಂದ, 1 ರಿಂದ 3ನೇ ಆರೋಪಿತರು ಸುರೇಶ್ ರವರ

| | |
|---|---|
| ಪ್ರಾಸಾ | 11 |
| ಚಾಸಾ | 11 |

ಜಮೀನಿನಲ್ಲಿ ನಾರಾಯಣಸ್ವಾಮಿರವರನ್ನು ಕೊಲೆ ಮಾಡಿದ್ದಾರೆಂದು ನಾನು ಪೊಲೀಸರಿಗೆ ಹೇಳಿಕೆ ನೀಡಿದ್ದೆನು ಎಂದರೆ ಸರಿಯಲ್ಲ.

**5.** ದಿಃ 07.10.2023 ರಂದು ಪೊಲೀಸರಿಗೆ ವಿವರವಾದ ಹೇಳಿಕೆಯನ್ನು ನೀಡಿದ್ದೆನೆಂದರೆ ಸರಿಯಲ್ಲ. ಸಾಕ್ಷಿಗೆ ಹೇಳಿಕೆಯ " ನಮ್ಮ ಗ್ರಾಮದ **......** **.........................** ತಿಳಿದು ಬಂದಿರುತ್ತದೆ" ಎಂಬ ಭಾಗವನ್ನು ವಿಶೇಷ ಸರ್ಕಾರಿ ಅಭಿಯೋಜಕರು ಸಾಕ್ಷಿಗೆ ಓದಿ ಹೇಳಿದ್ದು, ಸಾಕ್ಷಿಯು ಸದರಿ ಹೇಳಿಕೆಯನ್ನು ಅಲ್ಲಗಳೆದಿರುವುದರಿಂದ ಸದರಿ ಭಾಗವನ್ನು ನಿಪಿ **19** ಎಂದು ಗುರುತಿಸಲಾಯಿತು. ಎಲ್ಲಾ ವಿಚಾರ ನನಗೆ ಗೊತ್ತಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೆನೆಂದರೆ ಸರಿಯಲ್ಲ.

**<u>ಪಾಟೀ ಸವಾಲುಃ 1 ರಿಂದ 4ನೇ ಆರೋಪಿತರ ಪರ ಶ್ರೀಎಂ.ಜಿ.ಎಸ್.ಆರ್ ವಕೀಲರಿಂದಃ</u>**

ಶ್ರೀ.ಎಂ.ಜಿ.ಎಸ್.ಆರ್. ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳುತ್ತಾರೆ.

| | |
|---|---|
| ಪ್ರಾಸಾ | 11 |
| ಚಾಸಾ | 11 |

**<u>ಪಾಟೀ ಸವಾಲುಃ 5 ನೇ ಆರೋಪಿ ಪರ ಶ್ರೀ ಕೆ ಎಂ ಎಂ  ವಕೀಲರಿಂದಃ</u>**

ಕುಮಾರಿ ಇ.ವಿ. ವಕೀಲರು ಶ್ರೀ ಕೆ.ಎಂ.ಎಂ ವಕೀಲರ ಪರ ಪಾಟೀ ಸವಾಲು ಇಲ್ಲ ಎಂದು ಹೇಳುತ್ತಾರೆ.

**<u>ಪಾಟೀ ಸವಾಲುಃ 6 ನೇ ಆರೋಪಿ ಪರ ಶ್ರೀಹೆಚ್ ಸಿ ಪಿ  ವಕೀಲರಿಂದಃ</u>**

ಶ್ರೀ. ಹೆಚ್.ಸಿ.ಪಿ. ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

**<u>ಮರುವಿಚಾರಣೆಃ ಇಲ್ಲ.</u>**

**(ದಿನಾಂಕಃ 03.09.2024 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓದಿ ಹೇ ಕೇ ಸರಿ ಇದೆ**

**(ಶಿವಪ್ರಸಾದ್.ಕೆ.ಬಿ.)**
**1 ನೇ ಹೆಚ್ಚುವರಿ ಜಿಲ್ಲಾ ಮತ್ತು (ವಿಶೇಷ) ಸತ್ರ ನ್ಯಾಯಾಧೀಶರು,**
**ಚಿಕ್ಕಬಳ್ಳಾಪುರ.**